

# ಅಯ್ಯೋ ಶ್ರದ್ಧಾ!

■ ಪ್ರವೀಣ ಕುಲಕರ್ಣಿ

'ಅಯ್ಯೋ...'

ಆ ಕನ್ನಡತಿ ವೇದಿಕೆಯತ್ತ 'ಕಂಟೆಂಟ್ ಕ್ರಿಯೇಟರ್' ಪ್ರಶಸ್ತಿ ಪಡೆಯಲು ಬರುವಾಗ ಪ್ರಧಾನಿ ನರೇಂದ್ರ ಮೋದಿ ಅವರು ತೆಗೆದಿದ್ದ ಉದ್ಗಾರವಿದು. ಸಾಮಾಜಿಕ ಜಾಲತಾಣದಲ್ಲಿ ತುಂಬಾ ಜನಪ್ರಿಯರಾಗಿರುವ ನಮ್ಮ ಕಾರ್ಕಳದ ಶ್ರದ್ಧಾ ಜೈನ್ ಅವರನ್ನು ಇಡೀ ದೇಶವೇ ಗುರ್ತಿಸಿದೆ ಎನ್ನುವುದಕ್ಕೆ ಪ್ರಧಾನಿಯ ಉದ್ಗಾರವೇ ಸಾಕ್ಷಿ. 'ಅಯ್ಯೋ ಶ್ರದ್ಧಾ' ಹೆಸರಿನಲ್ಲಿ ಇನ್‌ಸ್ಟಾಗ್ರಾಮ್ ಖಾತೆಯನ್ನು ಹೊಂದಿರುವ ಅವರಿಗೆ ದೊಡ್ಡ ಸಂಖ್ಯೆಯ ಫಾಲೋವರ್‌ಗಳಿದ್ದಾರೆ. ನಟಿ, ರೇಡಿಯೊ ಜಾಕಿ, ಟಿ.ವಿ. ಶೋಗಳ ಹೋಸ್ಟ್, ಕಂಟೆಂಟ್ ಕ್ರಿಯೇಟರ್, ಸ್ಟ್ಯಾಂಡ್ ಅಪ್ ಕಾಮಿಡಿಯನ್... ಹೀಗೆ ಬಹುಮುಖ ಪ್ರತಿಭೆಯಾಗಿರುವ ಶ್ರದ್ಧಾ ಅವರೀಗ ಸ್ಟ್ಯಾಂಡ್ ಅಪ್ ಕಾಮಿಡಿ ಶೋಗಳಲ್ಲಿ ಸಿಕ್ಕಾಪಟ್ಟೆ ಬ್ಯುಸಿ ಆಗಿದ್ದಾರೆ. ಕನ್ನಡ, ಮರಾಠಿ, ಇಂಗ್ಲಿಷ್, ಹಿಂದಿ ಮತ್ತು ತುಳು ಭಾಷೆಯಲ್ಲಿ ಅವರು ಪಟಪಟನೆ ಅರಳು ಹುರಿದಂತೆ ಮಾತನಾಡಬಲ್ಲರು.

ಶ್ರದ್ಧಾ ಅವರ ಹಾಜರಿ ಇದೆಯೆಂದರೆ ಅಲ್ಲಿ ಭರ್ತಿ ಮನರಂಜನೆ ಇದೆ ಅಂತಲೇ ಲೆಕ್ಕ. ಸ್ಟ್ಯಾಂಡ್ ಅಪ್ ಕಾಮಿಡಿಗಳ ಹೆಸರಿನಲ್ಲಿ 'ಡಬಲ್ ಮೀನಿಂಗ್' ಜೋಕುಗಳ ಅಬ್ಬರವೇ ಹೆಚ್ಚಾಗಿರುವ, ಸೈದ್ಧಾಂತಿಕ ತಾಕಲಾಟಗಳಿಗೂ ಈ ವಿಧದ ಕಾಮಿಡಿ ಬಳಕೆ ಆಗುತ್ತಿರುವ ಇಂದಿನ ಸಂದರ್ಭದಲ್ಲಿ ಸ್ವಚ್ಛ ಹಾಗೂ ಸದಭಿರುಚಿಯಿಂದ ಕೂಡಿದ ಶ್ರದ್ಧಾ ಅವರ ತಮಾಷೆ ಭಿನ್ನವಾಗಿ ಗುರ್ತಿಸಿಕೊಂಡಿದೆ. ವರ್ಷಗಳ ಹಿಂದೆ ಬೋರ್ಡ್ ಪರೀಕ್ಷೆಯನ್ನು ರದ್ದುಗೊಳಿಸಿದಾಗ ಅವರು ಮಾಡಿದ ತಮಾಷೆ ನೋಡಿ: 'ಅಯ್ಯೋ ಈ ವರ್ಷ ಪರೀಕ್ಷೆಯೇ ರದ್ದಾಗಿದೆ. ವಿಶೇಷವೆಂದರೆ, ಈ ಸಲ ಪರೀಕ್ಷೆ ರದ್ದಾಗಲು ಪ್ರಶ್ನೆ ಪತ್ರಿಕೆ ಸೋರಿಕೆ ಕಾರಣವಲ್ಲ. ಪರೀಕ್ಷೆಯೇ ಇಲ್ಲದೆ ಶಿಕ್ಷಕರು ಫಲಿತಾಂಶ ನೀಡಬೇಕಿದೆ. ಆದರೆ, ಅವರಿಗೆ ಇಂತಹ ಸಂದರ್ಭದಲ್ಲಿ ಯಾವ ರೀತಿ ಫಲಿತಾಂಶ ನೀಡಬೇಕೆನ್ನುವ ತರಬೇತಿಯೇ ಇಲ್ಲ. ಶಿಕ್ಷಕರು ಈಗ ರಿಯಾಲಿಟಿ ಶೋಗಳ ತೀರ್ಪುಗಾರರಂತೆ ಆಗಿದ್ದಾರೆ. ಆದರೆ, ವಿದ್ಯಾರ್ಥಿಗಳಿಗೆ ವೋಟಿಂಗ್‌ಗೆ ಮನವಿ ಮಾಡುವ ಅವಕಾಶವೇ ಇಲ್ಲ'.

ಶೋ ನೀಡುವಾಗ ಅವರು ತೋರುವ ಆಂಗಿಕ ಹಾವಭಾವ, ಮುಗ್ಧ ಅಭಿವ್ಯಕ್ತಿ ತಮಾಷೆ ಪ್ರಿಯರಿಗೆ ಕಚಗುಳಿ ಇಡುತ್ತದೆ. ಯಾವುದೇ ನಗರಕ್ಕೆ ಹೋಗಲಿ, ಯಾವುದೇ ಕಾರ್ಯಕ್ರಮಕ್ಕೆ ಹೋಗಲಿ ಪೂರ್ವಸಿದ್ಧತೆ ಇಲ್ಲದೆ ಅವರು ಹೋಗುವುದೇ ಇಲ್ಲ. ಕಂಟೆಂಟ್‌ಗೆ ಅವರು ಹೆಚ್ಚಿನ ಒತ್ತು ನೀಡುವುದರಿಂದಲೇ ಅವರಿಗೊಂದು ದೊಡ್ಡ ಅಭಿಮಾನಿಗಳ ಪಡೆಯೇ ಹುಟ್ಟಿಕೊಂಡಿದೆ. ಹತ್ತು ವರ್ಷದ ಪುಟಾಣಿಗಳಿಂದ ಹಿಡಿದು 80 ವರ್ಷದ ಹಿರಿಯರವರೆಗೂ ಅವರ ಶೋವನ್ನು ಪ್ರೀತಿಸುವವರ ಬಳಗ ದೊಡ್ಡದಿದೆ. ಮಧ್ಯಮ ವರ್ಗದ ಕುಟುಂಬದಿಂದ ಬಂದಿರುವ ಶ್ರದ್ಧಾ, ಆ ವರ್ಗದವರನ್ನೇ ವಸ್ತುವಾಗಿಸಿ ಮಾಡುತ್ತಿರುವ ಕಾಮಿಡಿಗಳು ಜಗತ್ತಿನ ಮನಸೂರೆಗೊಂಡಿವೆ. 'ಸೋ ಮಿನಿ ಥಿಂಗ್ಸ್' ಎಂಬ ಹೆಸರಿನಲ್ಲಿ ಜಗತ್ತಿನ ಹಲವು ದೇಶಗಳಲ್ಲಿ ಅವರು ಶೋ ಕೊಟ್ಟಿದ್ದಾರೆ.

ಶ್ರದ್ಧಾ ಅವರ 'ಮಿಲೇ ಸುರ್ ಮೇರಾ ತುಮಾರಾ' ಶೋ ತಮಾಷೆಯ ಅಲೆ ಎಬ್ಬಿಸುತ್ತಲೇ ದೇಶಪ್ರೇಮದ ಜ್ಯೋತಿಯನ್ನೂ ಬೆಳಗುತ್ತದೆ. ಭಾರತದ ಎಲ್ಲ ಪ್ರಮುಖ ಭಾಷೆಗಳಲ್ಲಿ ಪೋಣಿಸಿದ 'ನನ್ನ ದನಿಗೆ, ನಿನ್ನ ದನಿಯು, ಸೇರಿದಂತೆ ನಮ್ಮ ದನಿಯು' ಸಾಲನ್ನು ಶ್ರದ್ಧಾ ಅವರ ಬಾಯಿಯಲ್ಲೇ ಕೇಳಬೇಕು. ಪಂ. ಭೀಮಸೇನ ಜೋಶಿ ಅವರು ಈಗ ಈ ಹಾಡನ್ನು ಸಂಯೋಜಿಸಿದ್ದರೆ, ಮಧ್ಯೆ ಮಧ್ಯೆ ಇಷ್ಟೊಂದು ಹಿಂದಿ ಏಕೆ ಎಂಬ ಆಕ್ಷೇಪ ಬರುತ್ತಿತ್ತು ಎಂದು ಅವರು ಕಾಲೆಳೆಯುತ್ತಾರೆ. ತಮಿಳು ಸಾಲು ಬಂದ ಕೂಡಲೇ ಕನ್ನಡದ ಸಾಲು ಬರುತ್ತದಲ್ಲ? ತಮಿಳು ಹಾಡಿನಲ್ಲಿ ಆ ಕಾರಣದಿಂದಲೇ ಕಮಲ್‌ಹಾಸನ್ ನಟನೆಯಿದೆ ಗೊತ್ತೆ? 'ಮುಂದೆ ಕನ್ನಡದ ಕುರಿತು ಗುರುತರವಾದ ಹೇಳಿಕೆಯೊಂದನ್ನು ನೀವು ನೀಡಲಿದ್ದೀರಿ. ಹೀಗಾಗಿ ಕನ್ನಡಕ್ಕೆ ಲಿಂಕ್ ನೀಡುವ ತಮಿಳು ಸಾಲು ಇರುವಾಗ ನಿಮ್ಮ ನಟನೆ ಇರಬೇಕು' ಎಂದು ಹಾಡಿನ ನಿರ್ಮಾಪಕರು ಆಗಲೇ ಕಮಲ್‌ಹಾಸನ್‌ಗೆ ಹೇಳಿದ್ದರು ಎನ್ನುತ್ತಾ ಶ್ರದ್ಧಾ ಚಟಾಕಿ ಹಾರಿಸುತ್ತಾರೆ!

ರೊಟಾಮ್ಯಾಕ್ ಎಂಬ ಪೆನ್ನಿನ ಜಾಹೀರಾತಿನಲ್ಲಿ ನಟಿ ರವಿನಾ ಟಂಡನ್ ಭಾರಿ ಗಾತ್ರದ ಪೆನ್ನು ಹಿಡಿದು 'ಲಿಖ್ತೆ ಲಿಖ್ತೆ ಲವ್ ಹೋ ಜಾಯ್' ಹಾಡಿಗೆ ಹೆಜ್ಜೆ ಹಾಕಿದ್ದರು. ಆ ಜಾಹೀರಾತು ನೋಡಿ, ಶ್ರದ್ಧಾ ತಮ್ಮ ಅಮ್ಮನಿಗೆ ಅದೇ ಪೆನ್ನು ಕೊಡಿಸು ಎಂದು ದುಂಬಾಲು ಬಿದ್ದರಂತೆ. 'ಬರೀತಾ ಬರೀತಾ ಮಾರ್ಕ್ಸ್ ಬರಬೇಕು. ಈ ಪ್ರೀತಿ ಆಗುವ ಪೆನ್ನು ಬೇಡ' ಎಂದ ಅವರ ಅಮ್ಮ, ಒಂದು ಟಿಕ್ ಟಿಕ್ ಪೆನ್ನು ಕೊಡಿಸಿದರಂತೆ. 'ವಾಷಿಂಗ್ ಪೌಡರ್ ನಿರ್ಮಾ'ದ ಜಾಹೀರಾತು ಗೊತ್ತಲ್ಲವೇ? ಅದರಲ್ಲಿ ಒಂದು ಸಾಲು ಬರುತ್ತದೆ: 'ಹೇಮಾ, ರೇಖಾ, ಜಯಾ ಔರ್ ಸುಷ್ಮಾ; ಸಬ್‌ಕೀ ಪಸಂದ್ ನಿರ್ಮಾ' ಎಂದು. ಇದೇ ಜಾಹೀರಾತು ಈಗ ಬಂದಿದ್ದರೆ 'ಲಿಂಗ ಸೂಕ್ಷ್ಮತೆಯೇ ಇಲ್ಲ' ಎಂಬ ತಕರಾರು ಬರುತ್ತಿತ್ತು. ಅದನ್ನು 'ಮೆಹ್ತಾ, ಶರ್ಮಾ, ಕಪೂರ್ ಔರ್ ವರ್ಮಾ' ಎಂದು ಬದಲಿಸಿದ್ದರೆ ದಕ್ಷಿಣ ಭಾರತದ ಪ್ರತಿನಿಧಿತ್ವವೇ ಇದರಲ್ಲಿಲ್ಲ ಎಂಬ ಆಕ್ಷೇಪ ಬರುತ್ತಿತ್ತು. 'ಶೆಟ್ಟಿ, ಶರ್ಮಾ, ಪಿಳ್ಳೆ, ಔರ್ ವರ್ಮಾ' ಎಂದು ಬದಲಿಸಿದ್ದರೆ ಒಂದೇ ಧರ್ಮ ಆಯಿತಲ್ಲ ಎಂಬ ಕೊರಗು ಕೇಳಿ ಬರುತ್ತಿತ್ತು ಎಂದು ಶ್ರದ್ಧಾ ಹೇಳುತ್ತಿದ್ದರೆ ಬಿದ್ದು ಬಿದ್ದು ನಗುವ ಸರದಿ ಸಭಿಕರದಾಗಿರುತ್ತದೆ.

ಪುಣೆಯಲ್ಲಿ ನಡೆದ ಶೋದಲ್ಲಿ ಅಲ್ಲಿನ ಪೋಹಾ (ಅವಲಕ್ಕಿ) ಪ್ರೇಮದ ಕುರಿತು ಶ್ರದ್ಧಾ ಬಣ್ಣಿಸಿದ್ದರು. ಕಾಂದಾ ಪೋಹಾ, ದಹಿ ಪೋಹಾ, ಆಲೂ ಪೋಹಾ, ವೆಜಿಟೇಬಲ್ ಪೋಹಾ, ಇಂದೋರಿ ಪೋಹಾ, ಟೊಮ್ಯಾಟೊ ಪೋಹಾ... ಹೀಗೆ 20ಕ್ಕೂ ಅಧಿಕ ತರಹದ ಪೋಹಾ ವೈವಿಧ್ಯವನ್ನು ಅವರು ಕೇಳುಗರ ಮುಂದಿಟ್ಟಿದ್ದರು. ಅದಕ್ಕೇ ಹೇಳುವುದು ಅವರು ಒಂದೊಂದು ಊರಿಗೆ ಹೋಗುವಾಗಲೂ ಅಲ್ಲಿನ ಸಂಸ್ಕೃತಿ–ಚರಿತ್ರೆ ಕುರಿತು ಆಳವಾಗಿ ಅಧ್ಯಯನ ಮಾಡಿ, ಕಂಟೆಂಟ್ ಸಿದ್ಧಪಡಿಸುತ್ತಾರೆ ಎಂದು. ಪುಣೇಕರ್‌ಗಳು ಮೂಗಿನ ಮೇಲೆ ಬೆರಳಿಟ್ಟಿದ್ದರು. ಹೀಗಾಗಿಯೇ ಅವರ 'ಸೋ ಮಿನಿ ಥಿಂಗ್ಸ್' ಎಲ್ಲೆಲ್ಲೂ ಸಿಕ್ಸರ್ ಬಾರಿಸುತ್ತಿದೆ! ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65